ಸಾಕ್ಷಿಯನ್ನು ದಿನಾಂಕಃ 07-11-2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀಃ ಎಸ್.ಎಸ್.ಡಿ , ಪ್ರತಿವಾದಿ ಪರ ವಕೀಲರಿಂದಃ

1. ವಂದನಾ ಶೆಟ್ಟಿ ನನ್ನ ದೊಡ್ಡ ಅಕ್ಕ . ಪ್ರಸ್ತುತ ವಂದನಾ ಶೆಟ್ಟಿಯವರು ಮಂಗಳೂರಿನಲ್ಲಿ ವಾಸ್ತವ್ಯ ಇದ್ದಾರೆ . ವಂದನಾ ಶೆಟ್ಟಿ ಯವರಿಗೆ 80 ವರ್ಷ ಪ್ರಾಯ . ವಾದಿಯು ಪ್ರತಿವಾದಿಗಳ ವಿರುದ್ಧ ದಾವೆಯನ್ನು ದಾಖಲು ಮಾಡಲು ನನಗೆ ಮುಕ್ತ್ಯಾರುನಾಮೆಯನ್ನು ನೀಡಿರುತ್ತಾರೆ . ಸದರಿ ಮುಕ್ತ್ಯಾರುನಾಮೆ ಯಾವ ದಿನಾಂಕ ಮತ್ತು ಇಸವಿಯಲ್ಲಿ ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ . 2018 ನೇ ಇಸವಿಯಲ್ಲಿ ವಾದಿ ನನ್ನ ಪರವಾಗಿ ಮುಕ್ತ್ಯಾರುನಾಮೆಯನ್ನು ಜಾರಿ ಮಾಡಿಕೊಟ್ಟಿದ್ದಾರೆ ಎಂದರೆ ನಿಖರವಾಗಿ ನನಗೆ ನೆನಪಿಲ್ಲ . ಅಂದಾಜು 2018ನೇ ಇಸವಿಯಲ್ಲಿ ಮುಕ್ತ್ಯಾರುನಾಮೆಯನ್ನು ಜಾರಿ ಮಾಡಿಕೊಟ್ಟಿರಬಹುದು . ಮುಕ್ತ್ಯಾರುನಾಮೆಯನ್ನು ಆಗ ಓದಿ ತಿಳಿದುಕೊಂಡಿದ್ದೆ , ಆದರೆ ಈಗ ನೆನಪಿಲ್ಲ . ಸದರಿ ಮುಕ್ತ್ಯಾರುನಾಮೆಯ ಮೂಲ ಪ್ರತಿ ನನ್ನ ಬಳಿ ಇದೆ . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು . ಅಂದಾಜು 2018ನೇ ಇಸವಿಯಲ್ಲಿ ವಾದಿ ನನ್ನ ಪರವಾಗಿ ಯಾವುದೇ ಮುಕ್ತ್ಯಾರುನಾಮೆಯನ್ನು ಜಾರಿ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ .

2. ದಾವಾ ಆಸ್ತಿಯಲ್ಲಿ ಇರುವ ಮನೆಯ ವಿಸ್ತೀರ್ಣ ಅರ್ಧ ಸೆಂಟ್ಸ್ ಇರಬಹುದು . ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ , ಸದರಿ ಫೋಟೋದಲ್ಲಿ ಕಂಡು ಬರುವ ಮನೆ ದಾವಾ ಆಸ್ತಿಯಲ್ಲಿ ಇರುವ ಮನೆಯೇ ಎಂದರೆ ಸಾಕ್ಷಿ ಆಗಿರಬಹುದು ಎಂದು ನೋಡಿ ಹೇಳಿದ ಮೇರೆಗೆ ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು . ಮನೆಯ ಎದುರುಗಡೆ ಕಾಂಪೌಂಡ್ ಗೋಡೆ ಮತ್ತು ಗೇಟ್ ಇದೆ ಎಂದರೆ ನನಗೆ ಗೊತ್ತಿಲ್ಲ .

ಒಂದೂವರೆ ವರ್ಷದ ಹಿಂದೆ ನಾನು ಕೊನೆಯ ಬಾರಿ ಸದರಿ ಮನೆಯನ್ನು ನೋಡಿರುತ್ತೇನೆ . ನಾನು ಮೂಡಬಿದ್ರೆಯಲ್ಲಿ ಇರುವುದಿಲ್ಲ , ಬದಲಾಗಿ ಮುಂಬೈನಲ್ಲಿ ವಾಸ್ತವ್ಯ ಇದ್ದೇನೆ .

3. ದಾವಾ ಆಸ್ತಿ ಹಂಚು ಛಾವಣಿಯ ಮನೆ . ಸದರಿ ಮನೆ ಮೊದಲು ಹುಲ್ಲು ಛಾವಣಿಯ ಮನೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ . ಸದರಿ ಮನೆಯ ಡೋರ್ ನಂಬರು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಡೋರ್ ನಂಬರನ್ನು ಅವರು ಸದರಿ ಮನೆ ಮತ್ತು ಜಾಗದ ಮಾಲೀಕರ ಅನುಮತಿ ಇಲ್ಲದೆ ಪಡೆದುಕೊಂಡಿದ್ದಾರೆ ಎಂದು ಹೇಳಿರುತ್ತಾರೆ. ಸದರಿ ಮನೆಯ ಡೋರ್ ನಂಬರು ಪ್ರತಿವಾದಿಯವರ ಹೆಸರಿಗೆ ಆಗಿ ಎಷ್ಟು ವರ್ಷವಾಯಿತು ಎಂದರೆ ನನಗೆ ಅದು ಗೊತ್ತಿಲ್ಲ . ನಮಗೆ ಗೊತ್ತಿಲ್ಲದೆ ಪ್ರತಿವಾದಿಯವರು ಡೋರ್ ನಂಬರನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ .

4. ಆ ಮನೆಯ ತೆರಿಗೆಯನ್ನು ನನ್ನ ಮಾವ ಮತ್ತು ಭಾವನವರು ಮೊದಲು ಕಟ್ಟುತ್ತಿದ್ದರು . ಇವರಿಬ್ಬರೂ ಆ ಮನೆಯಲ್ಲಿ ವಾಸ್ತವ್ಯ ಆಗ ಇದ್ದರು . ನನ್ನ ಮಾವನ ಹೆಸರು ಶಿವರಾಂ ಹೆಗ್ಡೆ ಮತ್ತು ನನ್ನ ಭಾವನ ಹೆಸರು ವಸಂತ ಅಜಿಲ . ಮೊದಲು ದಾವಾ ಮನೆ ನನ್ನ ಅಕ್ಕನಾದ ವಾದಿಯ ಅಂದರೆ ವಂದನಾ ಶೆಟ್ಟಿಯವರ ಹೆಸರಿನಲ್ಲಿ ಇತ್ತು . ಆ ಮನೆ ಮತ್ತು ಜಾಗದ ವ್ಯವಸ್ಥಾಪನೆಯನ್ನು ನನ್ನ ಭಾವ ಮತ್ತು ಮಾವ ನೋಡಿಕೊಳ್ಳುತ್ತಿದ್ದರು . ಆಗ ನಾನು ಚಿಕ್ಕವನಾಗಿದ್ದೆ . ದಾವಾ ಮನೆಯ ತೆರಿಗೆಯನ್ನು ನನ್ನ ಭಾವ ಮತ್ತು ಮಾವ ಕಟ್ಟುತ್ತಿದ್ದರು ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇಲ್ಲ . ವಾದಿಯ ಹೆಸರಿನಲ್ಲಿ ದಾವಾ ಮನೆಯ ಡೋರ್ ನಂಬರು ಆಗಿತ್ತೋ ಇಲ್ಲವೊ ನನಗೆ ನೆನಪಿಲ್ಲ .

ದಾವಾ ಮನೆಯ ಡೋರ್ ನಂಬರು ಯಾವತ್ತೂ ಸಹ ನನ್ನ ಅಕ್ಕನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ವಾದಿಯ ಹೆಸರಿನಲ್ಲಿ ದಾವಾ ಮನೆಯ ಡೋರ್ ನಂಬರು ಇತ್ತು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ .

5. ದಾವಾ ಮನೆಗೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಮತ್ತು ನೀರಿನ ಸಂಪರ್ಕ ಇದೆ . ಆದರೆ ಪ್ರತಿವಾದಿಗಳು ಸದರಿ ವಿದ್ಯುತ್‌ಚ್ಛಕ್ತಿ ಸಂಪರ್ಕ ಮತ್ತು ನೀರಿನ ಸಂಪರ್ಕವನ್ನು ನಮ್ಮ ಅನುಮತಿ ಇಲ್ಲದೆ ಸರ್ಕಾರದಿಂದ ಪಡೆದುಕೊಂಡಿರುತ್ತಾರೆ . ಪ್ರತಿವಾದಿಗಳು ಹಂಚು ಛಾವಣಿಯ ಮನೆಯನ್ನು ಕಟ್ಟಿ ಎಷ್ಟು ವರ್ಷಗಳು ಆಯಿತು ಎಂದು ನನಗೆ ನೆನಪಿಲ್ಲ . ಹಂಚು ಛಾವಣಿಯ ಮನೆಯನ್ನು ಕಟ್ಟಿದ ನಂತರ ಪ್ರತಿವಾದಿಗಳೇ ಸದರಿ ಮನೆಯ ತೆರಿಗೆಯನ್ನೂ ಸಹ ಸರ್ಕಾರಕ್ಕೆ ಕಟ್ಟಿಕೊಂಡು ಬರುತ್ತಿದ್ದಾರೆ ಎಂದರೆ ಇರಬಹುದು . ಆದರೆ ನನ್ನ ಅನುಮತಿಯನ್ನು ಪಡೆದಿರುವುದಿಲ್ಲ . ನನ್ನ ಅನುಮತಿಯನ್ನು ಪಡೆಯದೆ ಸದರಿ ಹಂಚಿನ ಮನೆಯನ್ನು ಪ್ರತಿವಾದಿಗಳು ಕಟ್ಟಿರುತ್ತಾರೆ .

6. 1ನೇ ಪ್ರತಿವಾದಿಯ ತಾಯಿ ಗಿರಿಯಮ್ಮ ಆಚಾರ್ತಿ ಸಹ ಸದರಿ ಮನೆಯಲ್ಲಿ ವಾಸ್ತವ್ಯ ಇದ್ದರು ಎಂದರೆ ನನಗೆ ಗೊತ್ತಿಲ್ಲ . ದಾವಾ ಮನೆಯ ಸುತ್ತಲೂ ಕಾಂಪೌಂಡ್ ಗೋಡೆ ಇದೆ ಎಂದರೆ ನಾನು ನೋಡಿಲ್ಲ . ಆ ಮನೆಯ ಒಳಗಡೆ ಎಷ್ಟು ಗೋಡೆಗಳು ಇವೆ ಎಂದರೆ ನಾನು ಮನೆಯ ಒಳಗಡೆ ಅಕ್ರಮ ಪ್ರವೇಶ ಮಾಡಿ ನೋಡಿರುವುದಿಲ್ಲ . ಕಾಂಪೌಂಡ್ ಗೋಡೆಯ ಒಳಗಡೆ ಕೃಷಿ ಅಭಿವೃದ್ಧಿ ಸಹ ಇದೆ ಎಂದರೆ ನನಗೆ ಗೊತ್ತಿಲ್ಲ . 1ನೇ ಪ್ರತಿವಾದಿಯ ಹೆಸರಿಗೆ ಡೋರ್ ನಂಬರು ಆದ ಬಗ್ಗೆ ನಾನು/ವಾದಿ ಗ್ರಾಮ ಪಂಚಾಯಿತಿಗೆ ಆಕ್ಷೇಪಣೆ ಸಲ್ಲಿಸಿದ್ದೇವೆಯೇ,

ಇಲ್ಲವೇ ಎಂದು ನನಗೆ ಗೊತ್ತಿಲ್ಲ . ನಿಡಿ-1 ಫೋಟೋದಲ್ಲಿ ಕಂಡು ಬರುವ ಮನೆ ಕಟ್ಟಿ ಎಷ್ಟು ವರ್ಷಗಳು ಆಯಿತು ಎಂದು ನನಗೆ ಗೊತ್ತಿಲ್ಲ .

7. ನನ್ನ ಭಾವ ದಾವಾ ಮನೆಯನ್ನು ಯಾರಿಗೆ , ಯಾವಾಗ ವಾಸ್ತವ್ಯಕ್ಕೆ ನೀಡಿದ್ದರು ಎಂದು ನನಗೆ ಗೊತ್ತಿಲ್ಲ . ನನ್ನ ಅಕ್ಕ ದಾವಾ ಮನೆಯನ್ನು ವಾಸ್ತವ್ಯಕ್ಕೆ ನೀಡಿದ್ದೇವೆ ಎಂದು ಹೇಳಿರುತ್ತಾರೆ . ದಾವಾ ಆಸ್ತಿಯನ್ನು ಮತ್ತು ಮನೆಯನ್ನು ಯಾರಿಗೆ , ಯಾವಾಗ ನೀಡಿದ್ದಾರೆ ಎಂಬ ಸಂಪೂರ್ಣ ಮಾಹಿತಿ ನನ್ನ ಅಕ್ಕನಿಗೆ ಇದೆ ಎಂದರೆ ಇರಬಹುದು . ಆದರೆ ಅವರು ಮರೆವಿನ ಕಾಯಿಲೆಯಿಂದ ಬಳಲುತ್ತಿದ್ದಾರೆ . ಅವರು ಅವಿವಾಹಿತಳಾಗಿದ್ದು , ಅವರಿಗೆ ಯಾರು ಇಲ್ಲ .

8. ದಾವಾ ಮನೆಯ 4 ದಿಕ್ಕಿನ ಸುತ್ತಲೂ ಕಾಂಪೌಂಡ್ ಗೋಡೆ ಇದ್ದು , ಸದರಿ ಕಾಂಪೌಂಡ್ ಗೋಡೆಯ ಒಳಗಡೆ 10 ಸೆಂಟ್ಸ್ ಜಾಗ ಇದೆ ಎಂದರೆ ನನಗೆ ಗೊತ್ತಿಲ್ಲ . ದಾವಾ ಮನೆ ಇರುವ ಸರ್ವೇ ನಂಬರು ಯಾವುದು ಎಂದು ನನಗೆ ಗೊತ್ತಿಲ್ಲ . ದಾವಾ ಮನೆ ಗಡಿಗುರುತುಗಳ ಬಗ್ಗೆ ನನಗೆ ಗೊತ್ತಿಲ್ಲ . ದಾವಾ ಮನೆಯ ದಕ್ಷಿಣ ಮತ್ತು ಪಶ್ಚಿಮಕ್ಕೆ ರಸ್ತೆ ಇದೆ. ದಾವಾ ಮನೆಯ ಹಿಂದೆ ನಮ್ಮ ಶಾಲೆ ಇದೆ . ದಾವಾ ಮನೆಯಿಂದ ಶಾಲೆ 25-30 ಮೀಟರ್ ಅಂತರದಲ್ಲಿ ಇದೆ .

9. ದಿಃ 25-04-1968 ರಲ್ಲಿ ಗಿರಿಯಮ್ಮನವರು ಹುಲ್ಲಿನ ಛಾವಣಿ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ . ಹುಲ್ಲಿನ ಛಾವಣಿಯ ಮನೆ ಬಿದ್ದು ಹೋದ ನಂತರ 1978 ನೇ ಇಸವಿಯಲ್ಲಿ ಸದರಿ ಗಿರಿಯಮ್ಮನವರು ಮಣ್ಣಿನ ಗೋಡೆ ಇರುವ ಮನೆಯನ್ನು

ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 2000 ನೇ ಇಸವಿಯಲ್ಲಿ 1ನೇ ಪ್ರತಿವಾದಿಯವರು ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಟ್ಛಕ್ತಿ ಸಂಪರ್ಕವನ್ನೂ ಸಹ ದಾವಾ ಮನೆಗೆ ಪಡೆದುಕೊಂಡಿದ್ದರು ಎಂದರೆ ಇರಬಹುದು . 2007ನೇ ಇಸವಿಯಲ್ಲಿ 1ನೇ ಪ್ರತಿವಾದಿಯು ಮಣ್ಣಿನ ಗೋಡೆ ಇರುವ ಮನೆಯನ್ನು ಹಂಚಿನ ಛಾವಣಿ ಮನೆಯನ್ನಾಗಿ ನವೀಕರಣ ಮಾಡಿರುತ್ತಾರೆ ಎಂದರೆ ಸರಿಯಲ್ಲ .

ದಿಃ 25-04-1968 ನೇ ಇಸವಿಯಿಂದ ಪ್ರತಿವಾದ ಪತ್ರದ ಅನುಸೂಚಿತ ಸ್ವತ್ತಿನಲ್ಲಿ ಗಿರಿಯಮ್ಮ ಹಾಗೂ ಅವರ ಮಗನಾದ 1ನೇ ಪ್ರತಿವಾದಿ ಮೃತ ರಾಘವ ಆಚಾರಿರವರು ಪ್ರತಿಕೂಲಾ ಸ್ವಾಧೀನಾನುಭೋಗದಲ್ಲಿ ಇದ್ದರು ಎಂದರೆ ಸರಿಯಲ್ಲ . ಈ ದಾವೆಯನ್ನು ದಾಖಲು ಮಾಡಿರುವ ವಿಚಾರ ವಾದಿಗೆ ಗೊತ್ತೇ ಇಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಗಳು ಪ್ರತಿವಾದ ಪತ್ರದಲ್ಲಿ ಹೇಳಿರುವ ವಿಚಾರಗಳನ್ನು ನಾನು ಓದಿದ್ದೇನೆ . ಪ್ರತಿವಾದಿಗಳು ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುವ ಆಸ್ತಿಯಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ . ನಾನು ವಾದ ಪತ್ರದಲ್ಲಿ ಕೇಳಿರುವ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ.ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ